424
12/8/04

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ತರಬೇತಿದಾರರಿಗೆ ತರಬೇತಿ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ ಮಂಜೂರಾತಿ ಕುರಿತು.

ಓದಲಾಗಿದೆ: 1. ಸರ್ಕಾರಿ ಆದೇಶ ಸಂ: ಕಾಇ 75 ಇಟಿಐ 2003, ದಿ:5-1-2004.
2. ಸರ್ಕಾರದ ಪತ್ರ ಸಂ: ಕಾಇ 75 ಇಟಿಐ 2003 ದಿ:27-2-2004.
3. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಇವರ ಪತ್ರ ಸಂ: ಉತಇ/ತರಬೇತಿ/ತ-2/ವಿವ-19/2004-05 ದಿ:14-7-2004.

* * *

**ಪ್ರಸ್ತಾವನೆ:**

ಸರ್ಕಾರಿ ಆದೇಶ ಸಂಖ್ಯೆ ದಿ:05-01-2004(ಓದಲಾಗಿದೆ ಕ್ರಮ ಸಂಖ್ಯೆ-1)ರಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ/ಕೇಂದ್ರಗಳಲ್ಲಿ ಪ್ರವೇಶ ಪಡೆಯುವ ಪ್ರತಿ ತರಬೇತಿದಾರರಿಂದ ಭದ್ರತಾ ಠೇವಣಿ ಮತ್ತು ಎಚ್ಚರಿಕೆ ಹಣ ವಸೂಲಾತಿ ಮಾಡುವ ಬದಲಾಗಿ 2003-04ನೇ ಸಾಲಿನಿಂದ ಅನ್ವಯವಾಗುವಂತೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಪ್ರತಿ ತರಬೇತಿದಾರರಿಂದ(ಎಸ್.ಸಿ/ಎಸ್.ಟಿ. ಹೊರತುಪಡಿಸಿ) ತರಬೇತಿ ಶುಲ್ಕದ ರೂಪದಲ್ಲಿ ವಾರ್ಷಿಕವಾಗಿ 1ನೇ ವರ್ಷದ ವೃತ್ತಿಗೆ ರೂ.500-00, 2ನೇ ವರ್ಷದ ವೃತ್ತಿಗೆ ರೂ.1,000-00 ಹಾಗೂ 3ನೇ ವರ್ಷದ ವೃತ್ತಿಗೆ ರೂ.1,500-00 ಎಂದು ನಿಗಧಿಪಡಿಸಲು ಹಾಗೂ ಎಸ್.ಸಿ./ಎಸ್.ಟಿ.ತರಬೇತಿದಾರರಿಗೆ ಕ್ರಮವಾಗಿ ರೂ.250-00 ರೂ.500-00 ಹಾಗೂ ರೂ.1,000-00 ಗಳನ್ನು ನಿಗಧಿಪಡಿಸಲು ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರಲ್ಲಿನ ಸರ್ಕಾರದ ಪತ್ರದಲ್ಲಿ ದಿ:5-1-2004ರಂದು ಹೊರಡಿಸಲಾದ ಸರ್ಕಾರಿ ಆದೇಶವನ್ನು ಸ್ಥಗಿತಗೊಳಿಸಿ, ಈ ಹಿಂದೆ ನಿಗಧಿಪಡಿಸಲಾಗಿದ್ದ ಶುಲ್ಕಗಳನ್ನೇ ಯಥಾ ಸ್ಥಿತಿಯಲ್ಲಿ ಸಧ್ಯಕ್ಕೆ ಮುಂದುವರೆಸುವಂತೆ ಸೂಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರಲ್ಲಿ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು, ರವರು 2004-05ನೇ ಸಾಲಿನಿಂದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ/ಕೇಂದ್ರಗಳಲ್ಲಿ ಪ್ರವೇಶ ಪಡೆಯುವ ಪ್ರತಿ ತರಬೇತಿದಾರರಿಂದ ವರ್ಷಕ್ಕೆ ರೂ.1,200-00 ರೂಪಾಯಿಗಳಂತೆ ಬೋಧನಾ ಶುಲ್ಕ/ಟ್ಯೂಷನ್ ಫೀ ವಸೂಲಾತಿ ಮಾಡಲು ಸರ್ಕಾರದ ಆದೇಶ ನೀಡುವಂತೆ ಕೋರಿರುತ್ತಾರೆ. ಆದ್ದರಿಂದ ಈ ಆದೇಶ.

...2...

<u>ಸರ್ಕಾರಿ ಆದೇಶ ಸಂಖ್ಯೆ: ಕಾಇ 75 ಇಟಿಐ 2003, ಬೆಂಗಳೂರು, ದಿನಾಂಕ: 03-08-2004</u>

ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಅವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿದೆ. ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ/ಕೇಂದ್ರಗಳಲ್ಲಿ ಪ್ರವೇಶ ಪಡೆಯುವ ಪ್ರತಿ ತರಬೇತಿದಾರರಿಂದ ಈ ಹಿಂದೆ ಇದ್ದಂತಹ ಭದ್ರತಾ ಠೇವಣಿ ಮತ್ತು ಎಚ್ಚರಿಕೆ ಹಣ ವಸೂಲಾತಿ ಮಾಡುವ ಬದಲಾಗಿ 2004-05ನೇ ಸಾಲಿನಿಂದ ಅನ್ವಯವಾಗುವಂತೆ ಪ್ರತಿ ವರ್ಷವೂ ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ವಾರ್ಷಿಕವಾಗಿ ರೂ.1,200-00(ರೂಪಾಯಿ ಒಂದು ಸಾವಿರದ ಇನ್ನೂರು ಮಾತ್ರ) ಭೋಧನಾ ಶುಲ್ಕ(ಟ್ಯೂಷನ್ ಫೀಸ್) ವಸೂಲಿ ಮಾಡಲು ನಿಗಧಿಪಡಿಸಿ ಈ ಆದೇಶ ಹೊರಡಿಸಿದೆ.

ಮೇಲ್ಕಂಡಂತೆ ಪಡೆಯಲಾದ ಮೊತ್ತವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆ "0230-00-800-5-00 ಒಟ್ಟಾರೆ ವಾರ್ಷಿಕ ಫೀ ಐ.ಟಿ.ಐ.ವಿದ್ಯಾರ್ಥಿಗಳು" ಜಮಾ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಸಹಿ/-

(ಎನ್. ಸುಬ್ರಮಣ್ಯರಾವ್),
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ
(ಉದ್ಯೋಗ ಮತ್ತು ತರಬೇತಿ)

ಸಂ: ಉತಇ:ತತ-2:ಸಿಆರ್-19:2004-05

ದಿ:9-8-2004

<u>ಸುತ್ತೋಲೆ</u>

ವಿಷಯ: ತರಬೇತಿ ಶುಲ್ಕ ವಸೂಲಾತಿ ಮಾಡುವ ಬಗ್ಗೆ ಕ್ರಮಗಳು

* * *

ಮೇಲಿನ ಸರ್ಕಾರಿ ಆದೇಶದಂತೆ 2004-05ನೇ ಸಾಲಿನಿಂದ ಅನ್ವಯವಾಗುವಂತೆ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರಸ್ತುತ ಶೈಕ್ಷಣಿಕ ಸಾಲಿನಿಂದ ಪ್ರವೇಶ ಪಡೆಯುವ ತರಬೇತಿದಾರರಿಂದ ಭದ್ರತಾ ಠೇವಣಿ

ಮತ್ತು ಎಚ್ಚರಿಕೆ ಹಣ ವಸೂಲು ಮಾಡುವ ಬದಲಿಗೆ ಪ್ರತಿ ವರ್ಷ ಪ್ರತಿ ತರಬೇತಿದಾರರಿಂದ ಆಗಸ್ಟ್ ಮಾಹೆಯಲ್ಲಿ ವಾರ್ಷಿಕವಾಗಿ ರೂ.1,200–00 ರಂತೆ ಬೋಧನಾ ಶುಲ್ಕ ವಸೂಲಿ ಮಾಡಿ, ಪಡೆಯಲಾದ ಮೊತ್ತವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆ "0230–00–800–5–00 ಒಟ್ಟಾರೆ ವಾರ್ಷಿಕ ಫೀ ಐ.ಟಿ.ಐ.ವಿದ್ಯಾರ್ಥಿಗಳು" ಜಮಾ ಮಾಡುವುದು. ಹಾಗೂ ಸಂದಾಯವಾಗಿರುವ ಮೊತ್ತದ ವಿವರಗಳನ್ನು ಪ್ರವೇಶ ಕಾರ್ಯ ಮುಗಿದ ನಂತರ ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. 2004–05ನೇ ಸಾಲಿನ ಸಮಾಲೋಚನಾ ಕಾರ್ಯ ನಡೆಸಲು ಅಭ್ಯರ್ಥಿಗಳಿಗೆ ಕಳುಹಿಸುವ ಕರೆ ಪತ್ರದಲ್ಲಿ ಬೋಧನಾ/ತರಬೇತಿ ಶುಲ್ಕದ ಬಗ್ಗೆ ಸೂಚಿಸಲು ತಿಳಿಸಲಾಗಿದೆ. ಹಾಗೂ ಸಂದರ್ಶನಕ್ಕೆ ಹಾಜರಾಗಿ ಪ್ರವೇಶ ಪಡೆಯುವ ಅಭ್ಯರ್ಥಿಗಳಿಂದ ಅದೇ ಸಮಯದಲ್ಲಿ ಒಂದೇ ಕಂತಿನಲ್ಲಿ ತರಬೇತಿ ಶುಲ್ಕವನ್ನು ಡಿ.ಡಿ. ಅಥವಾ ನಗದು ರೂಪದಲ್ಲಿ ಪಡೆಯುವುದು. ಮುಂದಿನ ಸಾಲುಗಳಿಗೆ ಅನ್ವಯವಾಗುವಂತೆ 2ನೇ ಹಾಗೂ 3ನೇ ವರ್ಷದ ತರಬೇತಿದಾರರುಗಳಿಂದ ಆಗಸ್ಟ್ 1 ರಿಂದ 10ರ ದಿನಾಂಕದೊಳಗೆ ತರಬೇತಿದಾರರುಗಳಿಂದ ತರಬೇತಿ ಶುಲ್ಕವನ್ನು ಪಡೆಯುವುದು. ತರಬೇತಿ ಶುಲ್ಕವನ್ನು ಯಾವುದೇ ಕಾರಣದಿಂದ ಒಂದು ಸಲ ತರಬೇತಿದಾರರು ಪಾವತಿ ಮಾಡಿದ ನಂತರ ಹಿಂತಿರುಗಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ತರಬೇತಿ ಶುಲ್ಕವನ್ನು ತರಬೇತಿದಾರರುಗಳಿಂದ ಪಡೆದಿರುವ ವಿವರಗಳನ್ನು ಉದಾ. ಕ್ರಸಂ, ಅಭ್ಯರ್ಥಿಯ ಹೆಸರು, ವೃತ್ತಿ, ಪ್ರವೇಶ ಪಡೆದ ದಿನಾಂಕ, ಡಿ.ಡಿ.ಸಂಖ್ಯೆ/ನಗದು ರಶೀದಿ ಸಂಖ್ಯೆ ಇತ್ಯಾದಿಗಳನ್ನು ರಿಜಿಸ್ಟರ್‌ನಲ್ಲಿ ದಾಖಲಾತಿ ಮಾಡುವುದು.

ಮುಂದುವರೆದು ಕುಶಲ ಕರ್ಮಿ ತರಬೇತಿ ಯೋಜನೆ ಅಲ್ಲದೆ ಇತರೆ ಯೋಜನೆಗಳಾದ ಪಿ.ಸಿ.ಪಿ.ಆರ್., ಕೆ.ಪಿ.ಟಿ.ಸಿ.ಎಲ್. ಹಾಗೂ ವರಾಹ ಚಕ್ರ ಯೋಜನೆ ಅಡಿಯಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ಬೋಧನಾ/ತರಬೇತಿ ಶುಲ್ಕ ಅನ್ವಯಿಸುವುದಿಲ್ಲ.

ಕರಡು ಪ್ರತಿಯನ್ನು ನಿರ್ದೇಶಕರು ಒಪ್ಪಿರುತ್ತಾರೆ)

ಜಂಟಿ ನಿರ್ದೇಶಕರು(ತರಬೇತಿ),
ನಿರ್ದೇಶಕರ ಪರವಾಗಿ,
ಉದ್ಯೋಗ ಮತ್ತು ತರಬೇತಿ.

ಗೆ,
ಎಲ್ಲಾ ಸರ್ಕಾರಿ ಕೈ.ತ.ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ
ಪ್ರತಿಯನ್ನು:

1. ಎಲ್ಲಾ 4 ವಿಭಾಗೀಯ ಕಛೇರಿಗಳ ಜಂಟೀ ನಿರ್ದೇಶಕರುಗಳಿಗೆ.
2. ಸಹಾಯಕ ನಿರ್ದೇಶಕರು(ಲೆಕ್ಕಪತ್ರ), ನಿರ್ದೇಶನಾಲಯ, ಮತ್ತು ಎಲ್ಲಾ ವಿಭಾಗದ ಉಪ ನಿರ್ದೇಶಕರು(ತ), ಸಹಾಯಕ ನಿರ್ದೇಶಕರು(ತ) ಮತ್ತು ಆಡಳಿತ ಸಹಾಯಕರು, ನಿರ್ದೇಶನಾಲಯ. ಇವರ ಮಾಹಿತಿಗಾಗಿ.

ಕರ್ನಾಟಕ ಸರ್ಕಾರ

... ಕಛೇರಿ.

ದಿನಾಂಕ:- 13-08-2004